ಗಾರ್ಮೆಂಟ್ಸ್ ಕಂಪನಿ ಸ್ಥಾಪನೆ

4 (461), ಶ್ರೀ ರಹೀಂ ಖಾನ್ (ಬೀದರ್)

ಪ್ರಶ್ನೆ

ಅ) ಹೈದರಾಬಾದ್ ಕರ್ನಾಟಕದ ಅತಿ ಹಿಂದುಳಿದ ಜಿಲ್ಲೆ ಬೀದರ್‌ನಲ್ಲಿ ಗಾರ್ಮೆಂಟ್ಸ್ ಕಂಪನಿ ಸ್ಥಾಪಿಸಲು ಹಲವಾರು ಬಾರಿ ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಎಲ್ಲಿ, ಯಾವಾಗ, ಸ್ಥಾಪಿಸಲಾಗುವುದು? (ಸಂಪೂರ್ಣ ವಿವರ ಒದಗಿಸುವುದು)

ಶ್ರೀ ಆರ್. ವರ್ತೂರು ಪ್ರಕಾಶ್ (ಜವಳಿ ಸಚಿವರು)

ಉತ್ತರ

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸರ್ಕಾರದ ವತಿಯಿಂದ ಗಾರ್ಮೆಂಟ್ ಕಂಪನಿಗಳನ್ನು ಸ್ಥಾಪಿಸಲು ಅವಕಾಶವಿರುವುದಿಲ್ಲ.

ಗಾರ್ಮೆಂಟ್ ಕಂಪನಿ ಸ್ಥಾಪಿಸಲು ಕೈಗಾರಿಕೋದ್ಯಮಿಗಳು ಆಸಕ್ತಿ ವಹಿಸಬೇಕಾಗುತ್ತದೆ.

ಪ್ರಮುಖ ಕೈಗಾರಿಕೋದ್ಯಮಿಗಳು ಬೀದರ್ ಜಿಲ್ಲೆಯಲ್ಲಿ ಗಾರ್ಮೆಂಟ್ ಕೈಗಾರಿಕೆ ಸ್ಥಾಪಿಸಲು ಆಸಕ್ತಿ ತೋರಿಸಿದಲ್ಲಿ ಸುವರ್ಣ ವಸ್ತ್ರ ನೀತಿ 2008–13ರ ಯೋಜನೆಯಡಿ ಅನ್ವಯವಾಗುವ ಆರ್ಥಿಕ ಸೌಲಭ್ಯಗಳನ್ನು ನೀಡಿ ಗಾರ್ಮೆಂಟ್ ಕೈಗಾರಿಕಾ ಸ್ಥಾಪನೆಗೆ ಪ್ರೋತ್ಸಾಹ ನೀಡಲಾಗುವುದು.

Reply

a) Yes. It has come to the notice of the Govt.

b) No such provision has been made in the Government to establish garment companies.

Industrialists have to take initiative to establish Garment companies.

If any Industrialist come forward from Bidar district to establish Garment industries in Bidar District, financial assistance would br provided as per the provisions of Suvarna Vastra Neethi policy 2008-13.

ಇ.ಎಸ್.ಐ. ಆಸ್ಪತ್ರೆಗಳಲ್ಲಿ ವೈದ್ಯರುಗಳ ಕೊರತೆ

55 (10), **ಶ್ರೀ ರಾಮಲಿಂಗಾ ರೆಡ್ಡಿ,** (ಬಿ.ಟಿ.ಎಂ.ಲೇಔಟ್)

ಪ್ರಶ್ನೆ

ಅ) ರಾಜ್ಯದಲ್ಲಿರುವ ಇ.ಎಸ್.ಐ. ಆಸ್ಪತ್ರೆಗಳ ಸಂಖ್ಯೆ ಎಷ್ಟು;

ಆ) ಈ ಆಸ್ಪತ್ರೆಗಳು ಎಲ್ಲೆಲ್ಲಿವೆ ಹಾಗೂ ಇಲ್ಲಿರುವ ಹಾಸಿಗೆಗಳ ಸಂಖ್ಯೆ ಎಷ್ಟು; ಆಸ್ಪತ್ರೆಗಳಲ್ಲಿ ವೈದ್ಯರುಗಳ ಕೊರತೆ ಇದೆಯೇ; ಹಾಗಿದ್ದಲ್ಲಿ ಯಾವ ಆಸ್ಪತ್ರೆಗಳಲ್ಲಿ ಎಷ್ಟೆಷ್ಟು ವೈದ್ಯರ ಕೊರತೆ ಇದೆ;

ಇ) ಖಾಲಿ ಇರತಕ್ಕ ವೈದ್ಯರುಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಎನ್.ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು)

ಉತ್ತರ

ಅ) ಒಟ್ಟು 09 ಇ.ಎಸ್.ಐ. ಆಸ್ಪತ್ರೆಗಳು

1) ರಾಜ್ಯ ಸರ್ಕಾರದ ಅಧೀನದಲ್ಲಿ–07

2) ಕಾರಾವಿ ನಿಗಮದ ಅಧೀನದಲ್ಲಿ–02

ಆ)

ಇಂದಿರಾನಗರ,	300 ಹಾಸಿಗೆ
ಮೈಸೂರು	100 ಹಾಸಿಗೆ
ಮಂಗಳೂರು	100 ಹಾಸಿಗೆ
ದಾವಣಗೆರೆ	50 ಹಾಸಿಗೆ
ಹುಬ್ಬಳ್ಳಿ	50 ಹಾಸಿಗೆ
ಬೆಳಗಾವಿ	50 ಹಾಸಿಗೆ
ದಾಂಡೇಲಿ	25 ಹಾಸಿಗೆ
ರಾಜಾಜಿನಗರ	500 ಹಾಸಿಗೆ
ಪೀಣ್ಯ	100 ಹಾಸಿಗೆ